

ತುದಿಗಣ್ಣೂ ಹಾಯಿಸದಿದ್ದಾಗ ರಮೇಶ ನಿರಾಳವಾಗಿ ನಿದ್ದೆಗೆ ಜಾರಿಬಿಟ್ಟ.

‘ದೆವ್ವನಂಥಾ ಕುಸ್ತಿಯ ಅಖಾಡಾದ ತುಂಬೆಲ್ಲ ತಾ ಫಳಫಳ ಎಣ್ಣೆ ಹಚ್ಚಿಕೊಂಡು ಓಡಾಡುತ್ತಿದ್ದಾನೆ. ಅಖಾಡದ ನಟ್ಟನಡುವೆ ಎಳೆದಿದ್ದ ಸುಣ್ಣದ ಬಿಳಿ ಗೆರೆಯ ಆಚೆಕಡೆ ಯಾವ ನರಹುಳಾನೂ ಇಲ್ಲ. ಆದರೂ ತಾನೇ ಗೆರೆಯ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಜಿಗಿಯುತ್ತಾ ತೊಡೆಗೆ ಸಡ್ಡು ಹೊಡೆಯುತ್ತಾ, “ಬಾ ಬಾ... ಬಂದರೇ ಬಾರೋ” ಅಂತ ಕೂಗುತ್ತಿದ್ದಾನೆ. ಕುಣಿದಾಟಕ್ಕೆ ಕಾಲಡಿಯ ಜಿನುಗು ಮಣ್ಣು ಹಾರಿ ಮೈ ಮೇಲೆ ಬಂದು ಕೂತು ಎಣ್ಣೆ, ಮಣ್ಣು ಎರಡೂ ಸೇರಿ ಚರ್ಮ ಧಗಧಗ ಉರಿಯುತ್ತಿದೆ. ಒಂದಷ್ಟು ದೂಳು ಕಣ್ಣಲ್ಲಿಯೂ ಬಿದ್ದು ಕಣ್ಣಲ್ಲಿ ನೀರು ತುಂಬಿ ಏನೂ ಕಾಣದಂತಾಗಿದೆ, ಈ ನಿರುಪಾಯ ಕ್ಷಣದಲ್ಲೇ ಯಾರಾದ್ರೂ ನನ್ನ ಮೇಲೆ ದಾಳಿ ಮಾಡಿಯಾರು ಅನ್ನುವ ಗಾಬರಿಗೆ ಕಣ್ಣು ತಿಕ್ಕಿಕೊಳ್ಳುತ್ತಾನೆ, ತಿಕ್ಕಿಕೊಂಡಷ್ಟೂ ಅಸ್ಪಷ್ಟ; ಎಲ್ಲ ಗೋಜಲು! ‘ಥೋ ಅದೇ ಯಾವತ್ತಿನ ಅರ್ಥವಾಗದ ಕನಸು’ ಅಂತ ನಿದ್ದೆಗಣ್ಣಲ್ಲೇ ಮೈ ಕೊಡವಿದ. ಅಪ್ಪ ಅಡುಗೆಮನೆಯಲ್ಲಿ ಮಾಡುತ್ತಿದ್ದ ಭಾಂಡಿಗಳ ಸಪ್ಪಳಕ್ಕೆ ನಿಚ್ಚಳವಾಗಿ ಎಚ್ಚರಾಗಿ ತಾನೆಲ್ಲಿದ್ದೇನೆ ಎಂಬರಿವು ಮೂಡಿದೊಡನೆ ಅವನಲ್ಲಿ ಏನೋ ಹೇಳಲಾಗದ ಕಳವಳ ತುಂಬಿಕೊಂಡಿತು.

‘ಕಟ್ ಕಟ್’ ಅಂತ ಕುಕ್ಕರಿನ ಡಬ್ಬಿಗೆ ಅದರ ಮುಚ್ಚಳ ಬಡಿಸುತ್ತಾ ಅಡ್ಡೊಮ್ಮೆ ಉದ್ದೊಮ್ಮೆ ಅದನ್ನು ತಿರುಗಿಸುತ್ತಾ ಒಳತುರುಕಲು ಅಪ್ಪ ಮಾಡುತ್ತಿದ್ದ ಖಟಿಪಿಟಿ ಕೇಳಿಸಿಯೂ ರಮೇಶನಿಗೆ ಏಳುವ ಮನಸ್ಸಾಗಲೇ ಇಲ್ಲ.

‘ಅವ್ವ ಕೊಂಡ ಇಪ್ಪತ್ತು ವರ್ಷ ಹಿಂದಿನ ಕುಕ್ಕರ್ ಅದು. ಡಬ್ಬಿಗೆ ಮುಚ್ಚಳವನ್ನು ಲಂಬಕೋನದಲ್ಲಿ